ಮಾಡಲು ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿ ಮಾಡಲಾಗಿದೆ. ಗುತ್ತಿಗೆದಾರರನ್ನು ನೇಮಿಸಲು ಪ್ರಕ್ರಿಯೆ ಪ್ರಗತಿಯಲ್ಲಿದೆ.

.....

115 (92): ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಹಣ ಎಷ್ಟು; (ಕಳೆದ 3 ವರ್ಷಗಳ ವಿವರವನ್ನು ನೀಡುವುದು);

ಆ) ಈವರೆವಿಗೂ ನೀಡಿರುವ ವಿದ್ಯುತ್ ಸಂಪರ್ಕಗಳು ಎಷ್ಟು; (ಕಳೆದ 3 ವರ್ಷಗಳ ವಿವರವನ್ನು ನೀಡುವುದು);

ಇ) ಪ್ರತಿ ವರ್ಷ ಎಷ್ಟು ವಿದ್ಯುತ್ ಮೀಟರ್ ಅಳವಡಿಸಲು ಗುರಿ ಹೊಂದಲಾಗಿತ್ತು ಹಾಗೂ ಎಷ್ಟು ಅಳವಡಿಸಲಾಗಿದೆ;

ಈ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಈ ವಿದ್ಯುತ್ ಸಂಪರ್ಕಗಳಿಗೆ ವಿದ್ಯುತ್ ಮೀಟರ್ ಅಳವಡಿಸಲು ಅನಗತ್ಯ ವೆಚ್ಚ ಮಾಡಿರುವುದು ನಿಜವೇ;

ಉ) ಈ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾಗ್ಯಜ್ಯೋಗಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಮಾಪಕ ಅಳವಡಿಸಲು ಕಳೆದ ಮೂರು ವರ್ಷಗಳಲ್ಲಿ ಮಾಡಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.

ಅವಧಿ	ಮಾಡಿದ ವೆಚ್ಚ (ಕೋಟಿ ರೂ.ಗಳಲ್ಲಿ)
2001–02	–
2002–03	20.867
2003–04	27.344
ಒಟ್ಟು	**48.211**

ಆ) ಕಳೆದ ಮೂರು ವರ್ಷಗಳಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡಲಾದ ವಿವರಗಳು ಈ ಕೆಳಕಂಡಂತಿದೆ

ಅವಧಿ	ವಿದ್ಯುತ್ ಸಂಪರ್ಕ ನೀಡಲಾದ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳ ಸಂಖ್ಯೆ
2001–02	69.522
2002–03	1.12.039
2003–04	37.538
ಒಟ್ಟು	**2.19.099**

ಕಳೆದ ಮೂರು ವರ್ಷಗಳಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ಮಾಪಕ ಅಳವಡಿಸಲು ನಿಗದಿ ಪಡಿಸಲಾದ ಗುರಿ ಮತ್ತು ಸಾಧನೆಯ ವಿವರಗಳು ಈ ಕೆಳಕಂಡಂತಿದೆ.

ಅವಧಿ	ಭೌತಿಕ ಗುರಿ ಸಂಖ್ಯೆಗಳಲ್ಲಿ	ಸಾಧನೆ ಸಂಖ್ಯೆಗಳಲ್ಲಿ
2001–02	–	–
2002–03	10,88,140	3,38,454
2003–04	7,16,797	3,56,102

ಈ) ಈ ವಿದ್ಯುತ್ ಸ್ಥಾವರಗಳಿಗೆ ಮಾಪಕ ಅಳವಡಿಸಲು ಮಾಡಿರುವ ಹಣದ ವೆಚ್ಚವು ಅನಗತ್ಯ ವೆಚ್ಚವಾಗಿರುವುದಿಲ್ಲ. ಈ ಕಾರ್ಯವನ್ನು ಟರ್ನ್ ಕೀ ಆಧಾರದಲ್ಲಿ ನಿರ್ವಹಿಸಲಾಗುತ್ತಿದೆ.

ಉ) ಎನರ್ಜಿ ಆಡಿಟಿಂಗ್‌ನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಉತ್ತರದಾಯಿತ್ವವನ್ನು ನಿಗದಿ ಪಡಿಸಲು ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮವು ಅವಶ್ಯಕವಾಗಿದೆ. ಸರ್ಕಾರದ ಯೂನಿವರ್ಸಲ್ ಮೀಟರಿಂಗ್ ಕಾರ್ಯ ನೀತಿಯಂತೆ. ಇದುವರೆವಿಗೆ ಮಾಪಕಗಳನ್ನು ಅಳವಡಿಸದೇ ಇರುವ ಭಾಗ್ಯಜ್ಯೋತಿ/ಕುಟೀರ ಜ್ಯೋತಿ, ನೀರಾವರಿ ಪಂಪು ಸೆಟ್ಟುಗಳು ಮತ್ತು ಬೀದಿ ದೀಪ ಸ್ಥಾವರಗಳಿಗೆ ಮಾಪಕಗಳನ್ನು ಅಳವಡಿಸಬೇಕಾಗಿರುತ್ತದೆ.

.....

116 (281): ಶ್ರೀ ಧ್ರುವನಾರಾಯಣ್ ಆರ್. (ಸಂತೇಮರಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ಜಲಭಾಗ್ಯ ನಿಗಮದ ಕಾರ್ಯವು ರಾಜ್ಯದ ಎಷ್ಟು ಜಿಲ್ಲೆಗಳ ವ್ಯಾಪ್ತಿಗೆ ಬರುತ್ತದೆ;

ಆ) ಈ ನಿಗಮಕ್ಕೆ ಇದುವರೆಗೆ ಸಂಗ್ರಹವಾಗಿರುವ ಬಂಡವಾಳವೆಷ್ಟು;

ಇ) ಸಂಗ್ರಹವಾಗಿರುವ ಹಣವನ್ನು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಂಚಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಈ) ಹಂಚಿಕೆಗೆ ಬಳಸಿರುವ ಮಾನದಂಡಗಳೇನು;

ಉ) ಬರಪೀಡಿತ ಚಾಮರಾಜನಗರ ಜಿಲ್ಲೆಗೆ ಈ ನಿಗಮದಿಂದ ವಿಶೇಷವಾಗಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಾವೇರಿ ನೀರಾವರಿ ನಿಗಮದ ಕಾರ್ಯ ವ್ಯಾಪ್ತಿಯು ಕಾವೇರಿ ಕೊಳ್ಳದ ಈ ಕೆಳಕಂಡ 8 ಜಿಲ್ಲೆಗಳಿಗೆ ಒಳಪಟ್ಟಿರುತ್ತದೆ

1) ಮೈಸೂರು 2) ಮಂಡ್ಯ 3) ಚಾಮರಾಜನಗರ 4) ಬೆಂಗಳೂರು ಗ್ರಾಮಾಂತರ
5) ಮಡಿಕೇರಿ 6) ಹಾಸನ 7) ಚಿಕ್ಕಮಂಗಳೂರು 8) ತುಮಕೂರು

ಆ) ರೂ. 249.55 ಕೋಟಿಗಳು